**ಸಾಕ್ಷಿಯನ್ನು ದಿಃ 02.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲೀಸ್ ದಾಖಲೆಗಳನ್ನು ಓದಿ ನೋಡಿ ತಿಳಿದುಕೊಂಡಿರುತ್ತೇನೆ. ಅಂತಿಮ ದೋಷರೋಪಣಾ ಪಟ್ಟಿ ನಮ್ಮ ಮೇಲೆ ಹೂಡಿದ್ದಾರೆ ಎಂದರೆ ಸರಿ. ನನಗೆ ವಾಹನ ಚಾಲನ ಪರವಾನಗಿ ಇಲ್ಲ. ಆ ದಿನ ನಾನು ನನ್ನ ಅಣ್ಣ ಹಾಗೂ ಸ್ನೇಹಿತ ಮೂರು ಜನ ಬೈಕ್ ನಲ್ಲಿ ಹೋಗುತ್ತಿದ್ದೇವು. ಆ ದಿನ ಕೆ.ಆರ್ ಪೇಟೆ ಕಡೆಯಿಂದ ಅಕ್ಕಿ ಹೆಬ್ಬಾಳು ಕಡೆ ಹೋಗುತ್ತಿದ್ದೇವು. ರಸ್ತೆ ಎಷ್ಟು ಅಗತ ಇತ್ತು ಎಂದು ಹೇಳಲು ಆಗುವುದಿಲ್ಲ. ನಾನು ಚಲಾಯಿಸುತ್ತಿದ್ದ ಬೈಕ್ ನನ್ನ ತಂದೆಗೆ ಸೇರಿದ್ದು. ಅದು ಕೆಎ-54-ಜೆ-8184. ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಯಿಸಿದ್ದೇನೆ. ವಾಹನ ಸಂಖ್ಯೆಯನ್ನು ನಾನೇ ಹೇಳಿದ್ದೇನೆ. ಅಪಘಾತ ನನ್ನ ಬಲಭಾಗಕ್ಕೆ ಆಗಿದೆ ಎಂದರೆ ಸರಿ. ನಾನು ರಸ್ತೆಯ ಎಡಭಾಗದಲ್ಲಿ ಚಲಾಯಿಸಿಕೊಂಡು ಹೋಗಿದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಎಡಬದಿಯಲ್ಲೇ ಹೋಗುತ್ತಿದ್ದೆ ಎನ್ನುತ್ತಾರೆ. ನಕ್ಷೆಯ ಪ್ರಕಾರವೂ ಅಪಘಾತ ನನ್ನ ಬಲಭಾಗಕ್ಕೆ ಆಗಿದೆ ಎಂದರೆ ಸರಿ.

2. ನಾನು ದೂರು ನೀಡಲು ಹೋಗಿದ್ದು ಅವರು ತೆಗೆದುಕೊಂಡಿಲ್ಲ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ತಪ್ಪಿರುವ ಕಾರಣ ನಾನು ಯಾವುದೇ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಕ್ರಿಮಿನಲ್ ಪ್ರಕರಣದಲ್ಲಿ ನಾನು ಜಾಮೀನು ಪಡೆದಿದ್ದೇನೆ. ದೋಷರೋಪಣಾ ಪಟ್ಟಿಯನ್ನು ನಾನು ಪ್ರಶ್ನಿಸಿಲ್ಲ. ನಾನು ವಾಹನದ ಮುಂಭಾಗದ ಹೆಡ್ ಲೈಟ್ ಮಾಸ್ಕ್ ಇತ್ಯಾದಿ ಜಖಂ ಆಗಿದೆ. ಎದುರುದಾರರ ವಾಹನಕ್ಕೆ ಹಿಂಭಾಗಕ್ಕೆ ಜಖಂ ಆಗಿದೆ ಎಂದರೆ ನಾನು ಅವರಿಗೆ ಡಿಕ್ಕಿ ಪಡಿಸಿಲ್ಲ ಎನ್ನುತ್ತಾರೆ. ಎದುರುದಾರರು ಅಪ್ರಾಪ್ತರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.